ಆ) ಈ ರೀತಿ ವರ್ಗಾಯಿಸಲು ಕಾರಣಗಳೇನು ; (ಸಮಗ್ರವಾದ ವರದಿಯನ್ನು ನೀಡುವುದು) ?

ಶ್ರೀ ಪಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) –

ಅ) 33 ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ 196 ಗ್ರಾಮ ಪಂಚಾಯತ್ ಕಾರ್ಯದರ್ಶಿಗಳ ಅವಧಿ ಪೂರ್ವ ವರ್ಗಾವಣೆ ಮಾಡಲಾಗಿದೆ.

ಆ) ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು ಹಾಗೂ ಮಾನ್ಯ ಲೋಕಸಭಾ ಸದಸ್ಯರು ಹಾಗೂ ಇತರ ಜನಪ್ರತಿನಿಧಿಗಳ ಕೋರಿಕೆ ಮತ್ತು ಮಾನ್ಯ ಮುಖ್ಯಮಂತ್ರಿಗಳ ನಿರ್ದೇಶದ ಮೇರೆಗೆ, ಹಾಗೂ ಸಾರ್ವಜನಿಕ ದೂರುಗಳು ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಅವಧಿಪೂರ್ವ ವರ್ಗಾವಣೆಗಳನ್ನು ಮಾಡಲಾಗಿರುತ್ತದೆ.

805 (1375) : ಶ್ರೀ ಚನ್ನಬಸವರಾಜ್ (ಅಪ್ಪಾಜಿ) (ಮುದ್ದೇಬಿಹಾಳ್): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಮನೆಗಳನ್ನು ನಗರ ಪ್ರದೇಶಗಳಲ್ಲಿ ಹೊಸದಾಗಿ ಸರ್ಕಾರ ಮಂಜೂರು ಮಾಡುವುದೇ ;

ಆ) ಹಾಗಿದ್ದಲ್ಲಿ, ಯಾವ ಯಾವ ನಿಯಮಗಳನುಸಾರ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುತ್ತಿದೆ ;

ಇ) ಆಶ್ರಯ ಮನೆಗಳಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವ ವಿಧಾನವನ್ನು ಆಶ್ರಯ ಸಮಿತಿಗಳ ವ್ಯಾಪ್ತಿಗೆ ಅಥವಾ ಪುರಸಭಾ ವ್ಯಾಪ್ತಿಗೆ ಬಿಡಲಾಗಿದೆಯೇ ?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು)–

ಅ) ಆಶ್ರಯ ಮನೆಗಳನ್ನು ನಗರ ಪ್ರದೇಶಗಳಲ್ಲಿ ಹೊಸದಾಗಿ ಅಂದರೆ 2006–07ನೇ ಸಾಲಿನಲ್ಲಿ ಯಾವುದೇ ಗುರಿ ನೀಡಿರುವುದಿಲ್ಲ.

2005–06ನೇ ಸಾಲಿನಲ್ಲಿ ನಗರ ಆಶ್ರಯ ಯೋಜನೆಯಡಿ 50000 ಮನೆಗಳ ಗುರಿಯನ್ನು ನಿಗದಿಪಡಿಸಿದ್ದು ಆಶ್ರಯ ಸಮಿತಿಗಳ ಮುಖಾಂತರ ಅರ್ಹ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಈ ಮನೆಗಳನ್ನು

ಪ್ರಸಕ್ತ ವರ್ಷ ಅಂದರೆ 2006–07ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ಆ) ನಗರ ಆಶ್ರಯ ಯೋಜನೆಯಡಿ ಫಲಾನುಭವಿಗಳ ಆಯ್ಕೆಯನ್ನು ಈ ಕೆಳಕಂಡ ನಿಯಮಗಳನ್ನು ಅನುಸರಿಸಿ ಆಯ್ಕೆ ಮಾಡಲಾಗುತ್ತದೆ.

1. ಫಲಾನುಭವಿ ಕರ್ನಾಟಕ ರಾಜ್ಯದ ಪ್ರಜೆಯಾಗಿದ್ದು ಯಾವುದೇ ನಗರ ಪ್ರದೇಶದಲ್ಲಿ ವಾಸವಾಗಿರಬೇಕು ಮತ್ತು ಆಯಾ ನಗರ ಸಭೆಯ ನಿವೇಶನ ರಹಿತ/ವಸತಿರಹಿತರ ಪಟ್ಟಿಯಲ್ಲಿ ಸೇರಿರಬೇಕು.

2. ಫಲಾನುಭವಿಯು ಆರ್ಥಿಕವಾಗಿ ಹಿಂದುಳಿದ್ದು, ವಾರ್ಷಿಕ ಆದಾಯವು ಬಡತನ ರೇಖೆಗಿಂತ ಕೆಳಗಿರುವವರಿಗೆ ನಿಗದಿಪಡಿಸಿರುವ ಮಿತಿಗಿಂತ ಕಡಿಮೆ ಇರಬೇಕು. (ಪ್ರಸ್ತುತ ಮಿತಿಯು ವಾರ್ಷಿಕ ರೂ.11800/– ಆಗಿರುತ್ತದೆ.)

3. ಮನೆ/ನಿವೇಶನದ ಹಕ್ಕುಪತ್ರ ಹೆಂಡತಿ ಹೆಸರಿನಲ್ಲಿ ಇರಬೇಕು. (ಅಂಗವಿಕಲರು, ವಿಧುರರು, ಮಾಜಿ ಸೈನಿಕರನ್ನು ಹೊರತುಪಡಿಸಿ)

4. ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ನಿವೇಶನ/ವಸತಿ ಸೌಲಭ್ಯ ಪಡೆದಿರಬಾರದು.

ಇ) ನಗರ ಆಶ್ರಯ ಯೋಜನೆಯಡಿ ಆಶ್ರಯ ಸಮಿತಿಗಳಿಗೆ ನಿಯಮಾನುಸಾರ ಫಲಾನುಭವಿಗಳ ಆಯ್ಕೆಯನ್ನು ಮಾಡಲು ವಹಿಸಲಾಗಿರುತ್ತದೆ.

806(1179): ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ (ಬಿಜಾಪುರ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯದಲ್ಲಿ ಬೋಧಕ/ ಬೋಧಕೇತರ ಸಿಬ್ಬಂದಿಯ ನೇಮಕಾತಿ ನಡೆದಿರುವುದು ನಿಜವೇ ;

ಆ) ಈ ನೇಮಕಾತಿಯಲ್ಲಿ ಯಾವ ಮಾನದಂಡಗಳನ್ನು ಅನುಸರಿಸಿ ನೇಮಕಾತಿ ಮಾಡಿಕೊಳ್ಳಲಾಗಿದೆ ;